ಸಾಕ್ಷಿಯನ್ನು ಈ ದಿನ ದಿನಾಂಕ 17-06-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ಪ್ರತಿವಾದಿಗಳ ಪರವಾಗಿ ಶ್ರೀ ಎಸ್ ಎಸ್ ಎ ವಕೀಲರಿಂದಃ

ನನ್ನ ಶಿಕ್ಷಣ 1 ನೇ ತರಗತಿವರೆಗೆ ಆಗಿರುತ್ತದೆ. ನನಗೆ ಓದು ಬರಹ ಬರುವುದಿಲ್ಲ ಸಹಿ ಮಾತ್ರ ಮಾಡುತ್ತೇನೆ. ನಾನು ಉಳಿದ ವಾದಿಯರ ಪರವಾಗಿ ಸಹ ಸಾಕ್ಷಿ ನುಡಿಯುತ್ತಿದ್ದೇನೆ. ಉಳಿದ ವಾದಿಯರು ನನಗೆ ಅವರ ಪರವಾಗಿ ಸಾಕ್ಷಿ ನುಡಿಯುವಂತೆ ಅಧಿಕಾರ ಪತ್ರ ವೆಗೈರೆ ಕೊಟ್ಟಿಲ್ಲ. ಪ್ರಸ್ತುತ ದಾವೆ ವಾದ ಪತ್ರ ಬರೆಯಲು ವಕೀಲರಿಗೆ ಮಾಹಿತಿ ಹಿರಿಯರು ಕೊಟ್ಟಿರುತ್ತಾರೆ. ಪ್ರಸ್ತುತ ದಾವೆಯನ್ನು ವಾಟ್ನಿ ಮಾಡಿಕೊಳ್ಳಲು ಹಾಕಿರುತ್ತೇನೆ. ದಾವಾ ಆಸ್ತಿಗಳ ಸರ್ವೆ ನಂಬರ ಮತ್ತು ಕ್ಷೇತ್ರ ನನಗೆ ಹೇಳಲು ಬರುವುದಿಲ್ಲ. ವಾದ ಪತ್ರದಲ್ಲಿ ಏನು ಬರೆದಿರುತ್ತಾರೆ ಅಂತಾ ವಕೀಲರು ನನಗೆ ಓದಿ ಹೇಳಿಲ್ಲ. ಪ್ರಸ್ತುತ ದಾವೆಯನ್ನು 6 ಆಸ್ತಿಗಳ ಮೇಲೆ ಮಾಡಿರುತ್ತೇವೆ. ಸಾಕ್ಷಿ ಮುಂದುವರೆದ ಇನ್ನೂ 2 ಆಸ್ತಿ ಉಳಿದಿವೆ ಅವುಗಳ ಮೇಲೆ ನಂತರ ಕೇಸ ಹಾಕುತ್ತೇವೆ ಎಂದು ಸ್ವತಃ ನುಡಿದಿರುತ್ತಾರೆ. ದಾವಾ ಆಸ್ತಿ ಸರ್ವೆ ನಂ.196/5 ಬ ಕ್ಷೇತ್ರ 33 ಗುಂಟೆ ಇದ್ದರಲ್ಲಿ ಸಹ ಪಾಲು ಬೇಕು ಎಂದು ದಾವೆ ಹಾಕಿರುತ್ತೇವೆ ಎಂದರೆ ಸರಿ. ಸದರಿ ಆಸ್ತಿ ಕರ್ನಾಟಕ ಸರ್ಕಾರದ ಹೆಸರಿಗೆ ದಾಖಲಿರುತ್ತದೆ ಎಂದರೆ ಸರಿ. ಸದರಿ

ಆಸ್ತಿಯನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ಆಸ್ತಿಯ ಉಳಿದ ಭಾಗವನ್ನು ದಾವಾ ಆಸ್ತಿಯನ್ನು ಪರಿಗಣಿಸುವಂತೆ ದಾವೆಯಲ್ಲಿ ಕೇಳಿದ್ದರಿಂದ ಕರ್ನಾಟಕ ಸರ್ಕಾರವನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಪೈಕಿ ಪೂರ್ವಜರ ಆಸ್ತಿಗಳು ಯಾವುವು ಮತ್ತು ಖರೀದಿ ಮಾಡಿದ ಆಸ್ತಿಗಳು ಯಾವುವು ಎಂದು ಹೇಳಲು ನನಗೆ ಬರುವುದಿಲ್ಲ. ನಮ್ಮ ಹಿರಿಯರಿಂದ ಬಂದ ಆಸ್ತಿ ಎಷ್ಟು ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳಲ್ಲಿ ಕೇಲಮೊಂದು ಆಸ್ತಿಗಳು ಪ್ರತಿವಾದಿಗಳ ತಂದೆ ದುಂಡಯ್ಯ ರವರ ಹೆಸರಿನಲ್ಲಿ ಖರೀದಿ ಮಾಡಿರುವಂತಹ ಆಸ್ತಿಗಳು ಇರುತ್ತವೆ ಎಂದರೆ ಸರಿ. ಸದರಿಯವರ ಹೆಸರಿಗೆ ಆಸ್ತಿ ಖರೀದಿ ಮಾಡುವ ಪೂರ್ವ ನಮ್ಮ ಕುಟುಂಬಕ್ಕೆ ಎಷ್ಟು ಉತ್ಪನ್ನ ಬರುತ್ತಿತ್ತು ಎಂದು ಹೇಳಲು ನನಗೆ ಬರುವುದಿಲ್ಲ. ನಾವು ರೈತ ನಾತೆಯಿಂದ ಜಮಿನು ಸಾಗುವಳಿ ಮಾಡುತ್ತಿದ್ದುರಿಂದ ಆಸ್ತಿಯ ಉತಾರದಲ್ಲಿ ಕರ್ನಾಟಕ ಸರ್ಕಾರ ಅಂತಾ ದಾಖಲಾಗಿದೆ ಎಂದರೆ ಸರಿ. ಆಸ್ತಿಗಳನ್ನು ನಮ್ಮ ಕೂಡು ಕುಟುಂಬದ ಉತ್ಪನದಿಂದ ಖರೀದಿ ಮಾಡಿದ್ದೇವೆ ಎಂದು ತೊರಿಸಲು ಯಾವುದೇ ದಾಖಲೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

O.S. NO. 230/2022

PW -1 .

Dated 17-06-2025

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.